ನಿಂದಲಾದರೂ ಅವರಿಗೆ ಮಾರ್ಚ್‌ನೊಳಗಾದರೂ ಸ್ವಲ್ಪ ಹಣವನ್ನು ಕೊಡುವ ವ್ಯವಸ್ಥೆ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ. ಬೇರೆ ಇಲಾಖೆಯವರು ಇದನ್ನು ತೀರ್ಮಾನ ಮಾಡಬೇಕೆಂದು ತಾವು ಹೇಳಿದರೆ, ಅದು ಆಗದ ಕೆಲಸ, ಆ ಕೆಲಸ ಆಗುವುದೇ ಇಲ್ಲ.

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ,

ನಿಯಮ 334 ರ ಮೇರೆಗೆ

ಒಂದಂಕಿ ಲಾಟರಿಯನ್ನು ನಿಷೇಧಿಸುವ ಬಗ್ಗೆ

ಶ್ರೀ ಎ.ಕೆ. ಅನಂತಕೃಷ್ಣ (ಶಿವಾಜಿನಗರ): ಸನ್ಮಾನ್ಯ ಅಧ್ಯಕ್ಷರೇ, ಒಂದಂಕಿ ಲಾಟರಿಯನ್ನು ನಿಷೇಧಿಸುವ ಬಗ್ಗೆ ಸರ್ಕಾರ ಹಿಂದೆಯೇ ಗಮನ ಹರಿಸಿದ್ದು ಈವರೆಗೂ ನಿಷೇಧಿಸಿರುವುದಿಲ್ಲ. ಇದರಿಂದ ಬಹಳಷ್ಟು ಸಂಸಾರಗಳು ಹಾಳಾಗಿವೆ ಹಾಗೂ ಹಾಳಾಗುತ್ತಿವೆ. ಸರ್ಕಾರ ಅಧಿಕೃತವಾಗಿ ನಿಷೇಧಾಜ್ಞೆಯನ್ನು ಜಾರಿ ಮಾಡದಿದ್ದಾಗ್ಯೂ ಪೋಲೀಸರ ಉದ್ದೇಶ ಎಷ್ಟೇ ಒಳ್ಳೆಯದಿದ್ದಾಗ್ಯೂ ಪೋಲೀಸ್ ಅಧಿಕಾರಿಗಳೇ ಕ್ರಮ ಕೈಗೊಳ್ಳುತ್ತಿರುವುದರಿಂದ ಹೆಚ್ಚಿನ ದುಷ್ಪರಿಣಾಮ ಆಗುತ್ತಿದೆ. ಆದ್ದರಿಂದ ಸರ್ಕಾರ ಅಧಿಕೃತವಾಗಿ ಒಂದಂಕಿ ಲಾಟರಿಯನ್ನು ನಿಷೇಧಿಸುವ ಹಾಗೂ ಒಂದಂಕಿ ಲಾಟರಿ ಮಾರಾಟ ಮಾಡುವವರನ್ನು ಪ್ರತಿಬಂಧಿಸುವ ಆಜ್ಞೆ ಹೊರಡಿಸುವ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ಹೇಳಿಕೆಯನ್ನು ನೀಡಬೇಕೆಂದು ಒತ್ತಾಯಿಸುತ್ತೇನೆ.

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ,

ನಮ್ಮ ರಾಜ್ಯದ "ಮೈಸೂರು ಲಕ್ಷ್ಮಿ" ಒಂದಂಕಿ ಲಾಟರಿಯನ್ನು ಅದರ ದುಷ್ಪರಿಣಾಮವನ್ನು ಅರಿತು ದಿನಾಂಕ : 29.11.1992 ರಿಂದ ಜಾರಿಗೆ ಬರುವಂತೆ ರದ್ದುಪಡಿಸಲಾಗಿದೆ. ಭಾರತದ ಸಂವಿಧಾನದ ಅನುಚ್ಛೇದ 258(1)ರಲ್ಲಿ ರಾಷ್ಟ್ರಪತಿಯವರಿಗೆ ನೀಡಲಾದ ಪ್ರಾಧಿಕಾರದನ್ವಯ ರಾಜ್ಯ ಅಥವಾ ಕೇಂದ್ರ ಸರ್ಕಾರ ಲಾಟರಿಯನ್ನು ನಡೆಸುತ್ತಿರುವುದು.

ಲಾಟರಿಗಳಿಗೆ ಸಂಬಂಧಪಟ್ಟಂತೆ ಕಾನೂನು ರೂಪಿಸುವ ಅಧಿಕಾರ ಕೇವಲ ಸಂಸತ್ತಿಗೆ ಮಾತ್ರ ಇರುತ್ತದೆಯೆಂದೂ ಇದರ ಬಗ್ಗೆ ಕಾನೂನು ರೂಪಿಸುವ ಅಧಿಕಾರವನ್ನು ರಾಜ್ಯಗಳು ಹೊಂದಿರುವುದಿಲ್ಲವೆಂದೂ ಸರ್ವೋಚ್ಚ ನ್ಯಾಯಾಲಯ ತೀರ್ಪಿತ್ತಿದೆ. ಆದುದರಿಂದ ಒಂದು ರಾಜ್ಯದ ಲಾಟರಿ ಟಿಕೇಟುಗಳ ಮಾರಾಟವನ್ನು ಇನ್ನೊಂದು ರಾಜ್ಯ ಸರ್ಕಾರವು ನಿಷೇಧಿಸಲು ಅವಕಾಶವಿರುವುದಿಲ್ಲ. ಇದರಿಂದಾಗಿ, ನಾನು ಇತರೆ ರಾಜ್ಯಗಳ ಒಂದಂಕಿ ಲಾಟರಿಯನ್ನು ನಿಷೇಧಿಸುವ ಅಧಿಕಾರವನ್ನು ರಾಜ್ಯಕ್ಕೆ ನೀಡಬೇಕೆಂದು ಈಗಾಗಲೇ ಕೇಂದ್ರ ಸರ್ಕಾರಕ್ಕೆ ಮನವಿಯನ್ನು ಸಲ್ಲಿಸಿರುತ್ತೇನೆ.

(2) ಹಾಲು ಉತ್ಪಾದಕರುಗಳಿಗೆ ಹಣ ಪಾವತಿ ಮಾಡದೇ ಇರುವುದು

ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ): ಸನ್ಮಾನ್ಯ ಅಧ್ಯಕ್ಷರೇ, ಮಂಡ್ಯ ಜಿಲ್ಲೆಯಾದ್ಯಂತ ಸುಮಾರು ಐದುನೂರಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಹಾಲಿನ ಉತ್ಪಾದಕರ ಸಹಕಾರ ಸಂಘಗಳಿದ್ದು ಈ ಹಾಲಿನ ಉತ್ಪಾದಕರ ಸಹಕಾರ ಸಂಘಕ್ಕೆ ಹಾಲಿನ ಉತ್ಪಾದಕರು ಹಾಲಿನ ಸರಬರಾಜು ಮಾಡಿದ್ದು, ಈ ಹಾಲಿನ ಉತ್ಪಾದಕರಿಗೆ ಕಳೆದ ಎಂಟರಿಂದ ಹತ್ತು ವಾರಗಳು ಹಾಲನ್ನು ಸರಬರಾಜು ಮಾಡಿರುವ ಹಣವೇ ಪಾವತಿಯಾಗದೇ ತೊಂದರೆಯಾಗಿದ್ದು, ರೈತರು ಸಮಸ್ಯೆಯಲ್ಲಿ ಸಿಲುಕಿದ್ದು ಮಂಡ್ಯ ಜಿಲ್ಲೆಯಾದ್ಯಂತ ತುಂಬಾ ಗಂಭೀರವಾದ ಪರಿಸ್ಥಿತಿ ಇದೆ.

ಈ ವಿಷಯವನ್ನು ಸರ್ಕಾರದ ಗಮನಕ್ಕೆ ತರಬಯಸುತ್ತಾ, ಹಾಲಿನ ಉತ್ಪಾದಕರಿಗೆ ಕೊಡಬೇಕಾಗಿರುವ ಹಣವನ್ನು ಈ ಕೂಡಲೇ ಪಾವತಿ ಮಾಡುವಂತೆ ಸರ್ಕಾರವನ್ನು ಒತ್ತಾಯ ಪೂರ್ವಕವಾಗಿ ಆಗ್ರಹಪಡಿಸುತ್ತೇನೆ.

ಶ್ರೀ ಕೆ. ಎನ್. ನಾಗೇಗೌಡ (ಪಶುಸಂಗೋಪನಾ ಸಚಿವರು) : ಮಾನ್ಯ ಅಧ್ಯಕ್ಷರೆ,

ಮಂಡ್ಯ ಹಾಲು ಒಕ್ಕೂಟದ ವ್ಯಾಪ್ತಿಯಲ್ಲಿ ಅಮೂಲ್ ಮಾದರಿಯ 566 ಹಾಲು ಉತ್ಪಾದಕರ ಸಹಕಾರ ಸಂಘಗಳು ಕಾರ್ಯಾಚರಣೆಯಲ್ಲಿರುತ್ತವೆ. ಮಂಡ್ಯ ಹಾಲು ಒಕ್ಕೂಟವು ಈ ಸಂಘಗಳಿಂದ ಪ್ರತಿದಿನ ಸರಾಸರಿ 1.02 ಲಕ್ಷ ಲೀಟರ್ ಹಾಲನ್ನು ಸಂಗ್ರಹಿಸುತ್ತಿದೆ ಮತ್ತು ದಿನಂಪ್ರತಿ 0.63 ಲಕ್ಷ ಲೀಟರ್ ಹಾಲನ್ನು ಮಾರಾಟ ಮಾಡುತ್ತಿದೆ. ಪ್ರಸ್ತುತ ರಾಜ್ಯದಲ್ಲಿ ಹಾಲು ಶೇಖರಣೆ ಹೆಚ್ಚಾಗಿರುವುದರಿಂದ, ಹಾಗೂ ಹಾಲು ಹಾಗೂ ಹಾಲು ಉತ್ಪನ್ನಗಳಿಗೆ ಬೇಡಿಕೆ ಇಲ್ಲದಿರುವುದರಿಂದ, ಸೂಕ್ತ ದರ ಸಿಗದೇ ಇರುವುದರಿಂದ ಅಲ್ಲದೇ ಇಂತಹುದೇ ಸನ್ನಿವೇಶ ದೇಶದ ಇತರೇ ರಾಜ್ಯಗಳಲ್ಲಿಯೂ ಇರುವುದರಿಂದ, ಅನಿವಾರ್ಯವಾಗಿ ಹೆಚ್ಚುವರಿ ಹಾಲನ್ನು ಹಾಲು ಉತ್ಪನ್ನಗಳಾಗಿ ಪರಿವರ್ತಿಸಿ ದಾಸ್ತಾನು ಮಾಡುತ್ತಿರುವುದರಿಂದ, ಹಾಲು ಉತ್ಪಾದಕರಿಗೆ ಹಣ ಪಾವತಿಯಲ್ಲಿ ವಿಳಂಬವುಂಟಾಗಿರುತ್ತದೆ.

ಪ್ರಸ್ತುತ ಮಂಡ್ಯ ಹಾಲು ಒಕ್ಕೂಟದಲ್ಲಿ 4 ಕೋಟಿ ರೂ.ಗಳ ಹಾಲು ಉತ್ಪನ್ನಗಳ ದಾಸ್ತಾನಿನಲ್ಲಿವೆ. ಮಂಡ್ಯ ಹಾಲು ಒಕ್ಕೂಟವು 7 ವಾರಗಳ ಹಣ ಬಿಡುಗಡೆ ಮಾಡಬೇಕಾಗಿದೆ. ಇದರ ಒಟ್ಟೂ ಮೊತ್ತ ಸುಮಾರು 3-60 ಕೋಟಿ ರೂ.ಗಳು. ದಿನಾಂಕ 5-2-1994ರಂದು ಕರ್ನಾಟಕ ಹಾಲು ಮಹಾಮಂಡಳಿಯು 70 ಲಕ್ಷ ರೂ.ಗಳನ್ನು ಬಿಡುಗಡೆ ಮಾಡಿರುತ್ತದೆ. ಉಳಿದ ಹಣವನ್ನು ಶೀಘ್ರದಲ್ಲಿಯೇ ಬಿಡುಗಡೆಮಾಡಿ ಹಾಲು ಉತ್ಪಾದಕ ರೈತರಿಗೆ ಪಾವತಿಸುವಂತೆ ಸರ್ಕಾರವು ಮಂಡ್ಯ ಹಾಲು ಒಕ್ಕೂಟಕ್ಕೆ ನಿರ್ದೇಶನ ನೀಡಿದೆ.

ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣ ಪ್ರಸ್ತಾವ

+ ಶ್ರೀ ಜಿ.ಎಸ್. ಶಿವನಂಜಪ್ಪ : ಸನ್ಮಾನ್ಯ ಅಧ್ಯಕ್ಷರೆ, ಫೆಬ್ರವರಿ 7,1994ರಂದು ವಿಧಾನಮಂಡಲದ ಸದಸ್ಯರುಗಳನ್ನುದ್ದೇಶಿಸಿ ದಯಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ವಿಧಾನ ಸಭೆಯ ಸದಸ್ಯರಾದ ನಾವು ರಾಜ್ಯಪಾಲರವರಿಗೆ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಮರ್ಪಿಸಲು ಅಪ್ಪಣೆ ಕೋರುತ್ತೇನೆ.

ಶ್ರೀ ಡಿ. ಹಲಗೇಗೌಡ : ಮಾನ್ಯ ಅಧ್ಯಕ್ಷರೇ, ಮಾನ್ಯ ಜಿ.ಎಸ್. ಶಿವನಂಜಪ್ಪನವರು ರಾಜ್ಯಪಾಲರ ಭಾಷಣಕ್ಕೆ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಮರ್ಪಿಸಲು ಮಂಡಿಸಿರುವ ಸೂಚನೆಯನ್ನು ಅನುಮೋದಿಸುತ್ತೇನೆ.

ಶ್ರೀ ಜಿ.ಎಸ್. ಶಿವನಂಜಪ್ಪ : ಸನ್ಮಾನ್ಯ ಅಧ್ಯಕ್ಷರೇ, ಜಂಟಿ ಅಧಿವೇಶನದಲ್ಲಿ ರಾಜ್ಯಪಾಲರು ಮಾಡಿದ ಭಾಷಣವು ಈ ರಾಜ್ಯದ ಸರ್ವಜನರ ಕಲ್ಯಾಣವನ್ನು ಪ್ರತಿಬಿಂಬಿಸತಕ್ಕಂಥ ಭಾಷಣ ಮಾಡಿದ್ದಾರೆ. ಅವರು ಪ್ರಗತಿಪರವಾದಂಥ ಯೋಜನೆಗಳನ್ನು ಮುಂದಿಟ್ಟಿದ್ದಾರೆ. ಹಿಂದಿನ ವರ್ಷದಲ್ಲಾದ ಆಗುಹೋಗುಗಳ ಬಗ್ಗೆ ಮತ್ತು ಮುಂದೆ ಆಗಬೇಕಾಗಿರತಕ್ಕ ಯೋಜನೆಗಳ ಬಗ್ಗೆ ಪಕ್ಷಿನೋಟವನ್ನು ನಾವು ಒಟ್ಟಾರೆ ರಾಜ್ಯಪಾಲರ ಭಾಷಣದಲ್ಲಿ ತಿಳಿದುಕೊಳ್ಳಬೇಕಾಗಿದೆ.

5.30 ಪಿ.ಎಂ

ಮುಂದೆ ಬರುವಂತಹ ಯೋಜನೆಗಳನ್ನು ಇದರಲ್ಲಿ ಅಳವಡಿಸಿ ನಿಜವಾಗಿಯೂ ಕಾರ್ಯಗತ ಮಾಡಿದರೆ ಕರ್ನಾಟಕ ರಾಷ್ಟ್ರದಲ್ಲೇ ಒಂದು ಸ್ವರ್ಗವಾಗಬಹುದು, ಎನ್ನತಕ್ಕಂಥ